# ಮಹತ್ತಿನ ಸನ್ನಿಧಿಯಲ್ಲಿ

◆ ಸ್ವಾಮಿ ಭಜನಾನಂದ

[ಮೇ ೨೫, ೨೦೦೫ರಂದು ಮಹಾಸಮಾಧಿಯನ್ನು ಹೊಂದಿದ ರಾಮಕೃಷ್ಣ ಮಹಾಸಂಘದ ೧೩ನೇ ಅಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿಯವರದ್ದು ಮಹತಿಯ ಉಜ್ವಲತೆಯಿಂದ ಕಂಗೊಳಿಸುತ್ತಿದ್ದ ಬದುಕಾಗಿತ್ತು. ಪೂಜ್ಯರು ಸ್ವಾಮಿ ವಿವೇಕಾನಂದರ ಸಂದೇಶವನ್ನು ಅತ್ಯಂತ ಸಮರ್ಪಕವಾಗಿ ಆಧುನಿಕ ವಿಚಾರಧಾರೆಯೊಂದಿಗೆ ಮೇಳೈಸಿ ಪ್ರಾಸಂಗಿಕಗೊಳಿಸಿದ್ದಾರೆ ಎಂದು ತಿಳಿಸಿರುವ ಸ್ವಾಮಿ ಭಜನಾನಂದಜಿ ಅವರು ರಾಮಕೃಷ್ಣ ಮಠ ಮತ್ತು ಮಿಷನ್ನಿನ ಸಹ ಕಾರ್ಯದರ್ಶಿಗಳು. ಪ್ರಸಿದ್ಧ ರಾಷ್ಟ್ರೀಯ ದೈನಿಕ *The Statesman* ನಲ್ಲಿ, ಮೇ ೭ರಂದು ಈ ಲೇಖನವು A Profile of Greatness ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿತ್ತು. ಇದರ ಅನುವಾದವನ್ನು ಕನ್ನಡ ಸಾಹಿತಿ ಡಾ.ಪ್ರಭುಶಂಕರ ಅವರು ಮಾಡಿದ್ದಾರೆ.]

ಈ ಜಗತ್ತಿನಲ್ಲಿ ಒಳ್ಳೆಯ ಜನ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ; ಆದರೆ ಮಹಾನ್ ವ್ಯಕ್ತಿಗಳು ಎಂದು ಕರೆಸಿಕೊಳ್ಳುವ ಅರ್ಹತೆಯುಳ್ಳವರು ತುಂಬ ಕಡಮೆ ಜನ. ಅವರು ಕಡಮೆ ಸಂಖ್ಯೆಯಲ್ಲಿದ್ದರೂ ಜಗತ್ತಿನ ಎಲ್ಲ ಭಾಗಗಳಲ್ಲೂ ಅಂಥ ಮಹನೀಯರೂ ಮಹಿಳೆಯರೂ ನಮಗೆ ಕಾಣಸಿಕ್ಕುತ್ತಾರೆ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅವರಲ್ಲಿ ಭಿನ್ನತೆಗಳಿದ್ದರೂ ಅವರಲ್ಲಿ ಕೆಲವು ಸಮಾನ ಲಕ್ಷಣಗಳಿವೆ: ಅವುಗಳೆಂದರೆ ಬದುಕಿನ ಅಲ್ಪತೆಗಳನ್ನೂ, ಸ್ವಭಾವದ ಚಂಚಲತೆಗಳನ್ನೂ ಮೀರಿರುವುದು; ಇಡೀ ಮಾನವತೆ ತಮ್ಮದು ಎಂದು ಭಾವಿಸಿರುವುದು; ತಮ್ಮ ಬದುಕಿಗೊಂದು ಉದ್ದೇಶವಿದೆ ಎಂಬ ಅದಮ್ಯವಾದ ಭಾವನೆಯಿಂದ ಕೂಡಿರುವುದು. ರಾಮಕೃಷ್ಣ ಮಹಾಸಂಘದ ಅಧ್ಯಕ್ಷರಾಗಿದ್ದು ೨೦೦೫ರ ಏಪ್ರಿಲ್ ೨೫ರಂದು ತೀರಿಕೊಂಡ ಸ್ವಾಮಿ ರಂಗನಾಥಾನಂದರು ಈ ಎಲ್ಲ ಗುಣಗಳ ಗಣಿಯಾಗಿದ್ದರು.

ಅವರ ಮನಸ್ಸು ಯಾವಾಗಲೂ ಪ್ರಜ್ಞೆಯ ಉನ್ನತ ಸ್ತರದಲ್ಲಿರುತ್ತಿತ್ತು. ನಿರಂತರವಾಗಿ ಸ್ಫೂರ್ತಿಗೊಂಡವರಂತೆ ಇರುತ್ತಿದ್ದರು ಅವರು. ರಾಮಕೃಷ್ಣ-ವಿವೇಕಾನಂದರ ಬೋಧನೆ, ಉಪನಿಷತ್ತುಗಳ ಬೆಳಕು, ಗೀತೆಯ ಶಕ್ತಿ ಮತ್ತು ಆಧುನಿಕ ವಿಜ್ಞಾನದ ಸಿದ್ಧಾಂತಗಳು—ಈ ಎಲ್ಲವೂ ಅವರ ಆತ್ಮಜ್ಯೋತಿಯ ಕಿರಣಗಳಾಗಿದ್ದವೋ ಎಂಬ ಭಾವನೆ ಬರುತ್ತಿತ್ತು. ಅವರ ಅಂತರಾತ್ಮದಲ್ಲಿ ನೆಲೆಗೊಂಡಿದ್ದ ದೃಢವಾದ ನಂಬಿಕೆಗಳೂ, ಸತ್ಯಗಳೂ ಅವರ ಸಂಪರ್ಕಕ್ಕೆ ಬಂದವರ ಮನಸ್ಸನ್ನು ಬೆಳಗುತ್ತಿದ್ದುವು.

ಸ್ವಾಮಿ ರಂಗನಾಥಾನಂದರು ಯಾವ ದಿಗಂತಗಳೂ ಇಲ್ಲದ ವ್ಯಕ್ತಿಯಾಗಿದ್ದರು. ಇಡೀ ಮಾನವತೆ ಒಂದು ದೊಡ್ಡ ಕುಟುಂಬ ಎಂಬ ಭಾವನೆ ಅವರಿಗಿತ್ತು. ಅಲ್ಲದೆ ಆ ಕುಟುಂಬದ ಯೋಗಕ್ಷೇಮದ ಬಗ್ಗೆ ಅವರಿಗೆ ಕಾಳಜಿಯಿತ್ತು. ಅವರ ಮಿತ್ರರಲ್ಲಿ, ಮೆಚ್ಚುಗರಲ್ಲಿ, ಶಿಷ್ಯರಲ್ಲಿ ಎಲ್ಲ ಜಾತಿಗಳಿಗೆ, ಧರ್ಮಗಳಿಗೆ, ಎಲ್ಲ ಪ್ರಾಂತಗಳಿಗೆ, ಬದುಕಿನ ವಿವಿಧ ಸ್ತರಗಳಿಗೆ ಸೇರಿದ ಸ್ತ್ರೀಪುರುಷರಿದ್ದರು. ಪಂಡಿತ ನೆಹರೂ, ಇಂದಿರಾ ಗಾಂಧೀ, ಶೇಕ್ ಅಬ್ದುಲ್ಲಾ, ಡಾ. ಸುಕಾರ್ನೋ, ಆಂಗ್‌ಸಾನ್ ಮುಂತಾದ ರಾಜಕಾರಣಿಗಳೂ, ಜೂಲಿಯನ್ ಹಕ್ಸ್ಲೆ ಮುಂತಾದ ವಿಜ್ಞಾನಿಗಳೂ, ಡಾ. ರಾಧಾಕೃಷ್ಣನ್ ಮುಂತಾದ ತತ್ವಶಾಸ್ತ್ರಜ್ಞರೂ ಹೇಗೆ ಅವರಿಗೆ ಸ್ನೇಹಿತರಾಗಿದ್ದರೋ, ಆಶ್ರಮದ ತೋಟಗಾರರು, ಆಳುಕಾಳುಗಳೂ ಅಷ್ಟೇ ಮಟ್ಟಿನ ಸ್ನೇಹಿತರಾಗಿದ್ದರು. ಜಗದ್ವಿಖ್ಯಾತವಾದ ಒಂದು ಮಹಾಸಂಸ್ಥೆಯ ಅಧ್ಯಕ್ಷರಾಗಿದ್ದರೂ ಆ ಪದವಿಯು ಯಾವುದೇ ನಿರ್ಬಂಧಗಳನ್ನು ತಮ್ಮ ಮೇಲೆ ಹೇರಲು ಅವರು ಅವಕಾಶ ಕೊಡಲಿಲ್ಲ. ಬದಲಿಗೆ ಸಂನ್ಯಾಸವು ಅವರನ್ನು ಅಜ್ಞಾನ, ಆಸೆ, ದ್ವೇಷ, ಭಯ, ಮುಂತಾದುವುಗಳಿಂದ ಬಿಡುಗಡೆಗೊಳಿಸಿತು. ಅವರ ಮುಕ್ತ ಮನಸ್ಸು ಅವರ ಸಂನ್ಯಾಸ ಜೀವನವನ್ನು ವಿಶ್ವಪ್ರಜ್ಞೆ, ವಿಶ್ವಪ್ರೇಮ, ಮುಂತಾದುವುಗಳ ವಿಶಾಲ ಆಕಾಶದಲ್ಲಿ ಅವರು ಸ್ವಚ್ಛಂದವಾಗಿ ಹಾರಾಡಲು ಅಗತ್ಯವಾದ ವಿಮಾನ ನಿಲ್ದಾಣದಂತೆ ಬಳಸಿಕೊಳ್ಳಲು ಅವಕಾಶ ನೀಡಿತು.

ರಂಗನಾಥಾನಂದರ ವ್ಯಕ್ತಿತ್ವದ ಆಕರ್ಷಣೆಯನ್ನು ಬೆಳಗಿ ತೋರಿಸುವಂತಹ ಒಂದು ಸಣ್ಣ ಘಟನೆ ನಡೆಯಿತು. ೧೯೬೬ರಲ್ಲಿ ಭಾರತ ಸರ್ಕಾರವು ಅವರನ್ನು ರಾಜಕೀಯವಾಗಿ ಕ್ಷೋಭೆಗೊಂಡಿದ್ದ ನಾಗಾಲ್ಯಾಂಡಿಗೆ ಕಳುಹಿಸಿತು. ಅಲ್ಲಿನ ಒಂದು ಊರಿನ ಕಾಲೇಜು ಸಭಾಂಗಣದಲ್ಲಿ ಅವರ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಅಲ್ಲಿನ ಜನ ನಾಗಾ ಕ್ರಿಶ್ಚಿಯನ್ನರು, ಅಷ್ಟೇನೂ ಸ್ನೇಹಪರರಲ್ಲ. ಹತ್ತು ಹನ್ನೆರಡು ಜನ ನಿಮ್ಮ ಉಪನ್ಯಾಸಕ್ಕೆ ಬಂದರೆ ಅದೇ ಹೆಚ್ಚು ಎಂದು ಸ್ವಾಮಿಜಿಗೆ ತಿಳಿಸಲಾಗಿತ್ತು. ಆದರೆ ಸ್ವಾಮಿಜಿ ಅಲ್ಲಿಗೆ ಹೋದಾಗ ೨೦೦೦ಕ್ಕೂ ಹೆಚ್ಚು ಜನ ಸಭಾಂಗಣದಲ್ಲೂ, ಹೊರಗೆ ಹುಲ್ಲಿನ ಮೇಲೂ ಜಮಾಯಿಸಿದ್ದರು, ಅಷ್ಟೂ ಜನ ಮಂತ್ರಮುಗ್ಧರಾಗಿ ಅವರ ಉಪನ್ಯಾಸವನ್ನು ಆಲಿಸಿದರು. ಸ್ವಾಮಿಜಿ ಹೇಳಿದರು: "ನೀವು ನಮ್ಮವರೆ, ನಮ್ಮ ರಕ್ತಮಾಂಸಗಳನ್ನು ಹಂಚಿಕೊಂಡಿರುವವರೇ. ಈ ಭಾರತದ

ಅಸ್ತಿಭಾರ ನೀವು, ನಾವು, ನಮ್ಮಂತಹ ಕೋಟಿಗಟ್ಟಲೆ ಜನ ಸಾಮಾನ್ಯರು. ಈ ದೇಶದ ಯಾವುದೇ ಭಾಗ ಇನ್ನೊಂದು ಭಾಗವನ್ನಾಗಲಿ, ಗುಂಪನ್ನಾಗಲಿ ಆಳುತ್ತಿಲ್ಲ. ಭಾರತ ಪ್ರಜಾಸತ್ತಾತ್ಮಕ ಗಣರಾಜ್ಯ. ಅದು ತನ್ನೆಲ್ಲ ಪ್ರಜೆಗಳನ್ನು ಆರ್ಥಿಕವಾಗಿ ಸಬಲಗೊಳಿಸಲು, ಸಾಮಾಜಿಕವಾಗಿ ಗೌರವ ಗಳಿಸಿಕೊಳ್ಳಲು ಶ್ರಮಿಸುತ್ತಿದೆ." ಉಪನ್ಯಾಸ ಮುಗಿದ ಕೂಡಲೇ ಜನ, ಅವರಲ್ಲೂ ಹೆಚ್ಚಾಗಿ ತರುಣ ತರುಣಿಯರು ಅವರನ್ನು ಮುತ್ತಿಕೊಂಡರು. ತಮ್ಮನ್ನು, ತಮ್ಮ ಧರ್ಮವನ್ನು ತನ್ನದೆಂದೇ ಭಾವಿಸಿ, ತಮ್ಮ ಯೋಗಕ್ಷೇಮದಲ್ಲಿ ತೀವ್ರವಾದ ಆಸಕ್ತಿಯನ್ನು ತೋರಿಸಿದ ಕಾವಿಧಾರಿ ಸಂನ್ಯಾಸಿಯೊಬ್ಬನನ್ನು ಅವರು ಕಂಡದ್ದು ಅದೇ ಮೊದಲು.

ಕೆಲವು ವರ್ಷಗಳ ಬಳಿಕ ಸ್ವಾಮಿಜಿ ಮತ್ತೆ ನಾಗಾಲ್ಯಾಂಡಿಗೆ ಹೋಗಿ ಅನೇಕ ಕಡೆಗಳಲ್ಲಿ ಉಪನ್ಯಾಸಗಳನ್ನು ನೀಡಿದರು. ಅಂಥ ಸಭೆಗಳಲ್ಲಿ ಒಂದರಲ್ಲಿ, ದೀಮಾಪುರ ಎಂಬ ಊರಿನ ನಾಗಾ ಅಧ್ಯಕ್ಷರು ವಂದನಾರ್ಪಣೆ ಮಾಡುತ್ತಾ ಹೇಳಿದರು: "ಸ್ವಾಮಿಜಿ, ನಿಮ್ಮನ್ನು ಮತ್ತೆ ಮತ್ತೆ ಆಹ್ವಾನಿಸುವಂತೆ ನಮ್ಮ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನೀವು ನಮಗೆ ಬೇಕು ಸ್ವಾಮಿಜಿ, ನಿಮ್ಮ ಭಾವನೆಗಳೂ ನಮಗೆ ಬೇಕು."

ತಮ್ಮ ಹದಿನಾಲ್ಕನೆಯ ವಯಸ್ಸಿನಲ್ಲಿ **ಶ್ರೀರಾಮಕೃಷ್ಣ ವಚನವೇದ** (*The Gospel of Sri Ramakrishna*) ಮತ್ತು **ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ** (*The Complete Works of Swami Vivekananda*) ಇವನ್ನು ಓದಿದಾಗ ಶಂಕರ ಮೆನನ್‌ಗೆ (ಸ್ವಾಮಿ ರಂಗನಾಥಾನಂದರ ಪೂರ್ವಾಶ್ರಮದ ಹೆಸರು) ಬದುಕಿನ ಗುರಿಯ ವಿಷಯದಲ್ಲೂ, ತಾವು ಮುಂದೆ ವಹಿಸಬೇಕಾಗಿರುವ ಪಾತ್ರದ ವಿಷಯದಲ್ಲೂ ಸ್ಪಷ್ಟವಾದ ಕಲ್ಪನೆ ಬಂದಿತು. ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಸಂದೇಶಗಳನ್ನು ಪ್ರಸಾರ ಮಾಡುವುದರ ಮೂಲಕ ಭಗವಂತನ ಮತ್ತು ಮಾನವತೆಯ ಸೇವೆಗಾಗಿ ತಮ್ಮ ಇಡೀ ಜೀವನವನ್ನು ಮುಡಿಪಾಗಿಡಬೇಕು ಎಂದು ಅವರು ತೀರ್ಮಾನಿಸಿದರು. ಅರ್ಪಣಾಭಾವದ ಈ ತೀರ್ಮಾನ ಅವರ ತೀವ್ರವಾದ ಹಂಬಲ ಮತ್ತು ಜೀವನದ ಗುರಿಗಳಾಗಿ ಅವರ ಬದುಕಿನ ಕೊನೆಯವರೆಗೂ ಉಳಿದುವು.



ಅವರು ಸ್ವಯಂರೂಪಿತರು—ಎಂದರೆ, ತಮ್ಮನ್ನು ತಾವೇ ರೂಪಿಸಿಕೊಂಡವರು. ಅವರು ಹದಿನೆಂಟನೆಯ ವಯಸ್ಸಿಗೆ ಕಾಲಿಡುವ ಮುನ್ನ ರಾಮಕೃಷ್ಣ ಮಹಾಸಂಘಕ್ಕೆ ಸೇರುವ ತೀರ್ಮಾನ ತೆಗೆದುಕೊಂಡರಷ್ಟೆ. ಆಗಿನ್ನೂ ಸ್ಕೂಲ್ ಫೈನಲ್ ಪರೀಕ್ಷೆ—ಈಗಿನ ಎಸ್.ಎಸ್.ಎಲ್.ಸಿ—ಅಷ್ಟನ್ನೇ ಮುಗಿಸಿದ್ದದ್ದು. ಆದರೆ ಅದಕ್ಕೆ ಪೂರಕವಾಗಿ ಅವರು ನಡೆಸಿದ ಶಿಸ್ತುಬದ್ಧ ಅಧ್ಯಯನ ಅಗಾಧವಾದದ್ದು. ಅವರು ಮೈಸೂರು ಆಶ್ರಮಕ್ಕೆ ಸೇರಿ ಬ್ರಹ್ಮಚಾರಿಯಾಗಿದ್ದಾಗ ಅವರು ಅಡುಗೆ ಮಾಡಬೇಕಾಗಿತ್ತು, ಪಾತ್ರೆ ತೊಳೆಯಬೇಕಾಗಿತ್ತು. ತಾವು ಮಾಡುತ್ತಿದ್ದ ಕೆಲಸಗಳ ನಡುವೆಯೇ ಅವರು ಅಧ್ಯಯನ ಮಾಡುತ್ತಿದ್ದರು. ಅಕ್ಕಿ, ಬೇಳೆ, ತರಕಾರಿಗಳು ಬೇಯುತ್ತಿದ್ದಾಗಲೇ ಪಕ್ಕದಲ್ಲಿ ಸ್ಟೂಲಿನ ಮೇಲೆ ಕುಳಿತು ಅವರು ಓದುತ್ತಿದ್ದರು. ಆಶ್ರಮಕ್ಕೆ ಸೇರಿದ ಮೊದಲ ದಿನಗಳಲ್ಲಿ ಅವರು ಓದಿದ ಅನೇಕ ಪುಸ್ತಕಗಳಲ್ಲಿ ಈ ಕೆಲವನ್ನು ಹೆಸರಿಸಬಹುದು: A.J. Thompson's *Introduction to Science*, H.G. Well's *Outline History of the World*, Julian Huxley and H.G.Well's *Science of Life*, Macdougal's *Introduction to Psychology*, Herbert Spencer's *First Principles* and Thilly's *History of Philosophy*. ಸಂಕ್ಷೇಪವಾಗಿ ಹೇಳಬೇಕಾದರೆ, ವಿಜ್ಞಾನ, ಇತಿಹಾಸ, ಮನಶ್ಶಾಸ್ತ್ರ ಮತ್ತು ತತ್ತ್ವಶಾಸ್ತ್ರಗಳಿಗೆ ಸಂಬಂಧಿಸಿದಂತೆ ಆಯಾ ಶಾಸ್ತ್ರಗಳಲ್ಲಿ ಪರಿಣತರಾದವರ ಕೃತಿಗಳು. ಆ ಕೃತಿಗಳೋ ಸಮಗ್ರವೂ ಪ್ರಮಾಣಬದ್ಧವೂ ಆದವು. ಹೀಗೆ, ಈ ಪಾಶ್ಚಾತ್ಯರು ಬರೆದ ಶಾಸ್ತ್ರಗ್ರಂಥಗಳನ್ನು ಓದಿದ್ದರಿಂದ ಉಪನಿಷತ್ತುಗಳು ಮತ್ತು ಗೀತೆ ಮುಂತಾದ ಗ್ರಂಥಗಳಲ್ಲೂ, ಸ್ವಾಮಿ ವಿವೇಕಾನಂದರು ಮತ್ತು ಶ್ರೀರಾಮಕೃಷ್ಣರ ಉಪದೇಶಗಳಲ್ಲೂ ಇದ್ದ ಮೌಲಿಕವಾದ ವಿಚಾರಗಳನ್ನು ಸರಿಯಾಗಿ ಪರಾಮರ್ಶಿಸಿ, ಆಧುನಿಕ ಪರಿಭಾಷೆಯಲ್ಲಿ ಅವನ್ನು ವಿವರಿಸುವುದು ಸ್ವಾಮಿ ರಂಗನಾಥಾನಂದರಿಗೆ ಸಾಧ್ಯವಾಯಿತು.

ಮೈಸೂರಿನಲ್ಲಿ ಕಳೆದ ಆಶ್ರಮವಾಸದ ಕಾಲದಲ್ಲೇ ಅವರು ಸಂಸ್ಕೃತ ಭಾಷೆಯನ್ನು ಸರಿಯಾದ ರೀತಿಯಲ್ಲಿ ಕಲಿಯು

ವುದು ಸಾಧ್ಯವಾಯಿತು. ಅಷ್ಟೇ ಅಲ್ಲ ಇಂಗ್ಲಿಷ್ ಭಾಷೆಯ ಮೇಲೆಯೂ ಪ್ರಭುತ್ವವನ್ನು ಸಾಧಿಸಿದರು. ಅವರ ಸ್ಮರಣಶಕ್ತಿಯಂತೂ ಅದ್ಭುತವೂ ಅಪೂರ್ವವೂ ಆದದ್ದು. ಇಡೀ ಭಗವದ್ಗೀತೆ, ಉಪನಿಷತ್ತುಗಳ ಮುಖ್ಯವಾದ ಮಂತ್ರಗಳು, ಭಾಗವತದ ನೂರಾರು ಶ್ಲೋಕಗಳು ಅವರಿಗೆ ಹೃದ್ಗತವಾಗಿದ್ದುವು. ಜೊತೆಗೆ, ಶಂಕರಾಚಾರ್ಯರ ಭಾಷ್ಯಭಾಗಗಳನ್ನೂ, ಸ್ವಾಮಿ ವಿವೇಕಾನಂದರ ಕೃತಿಗಳ ಭಾಗಗಳನ್ನೂ ಲೀಲಾಜಾಲವಾಗಿ ಉದ್ಧರಿಸಿ ಹೇಳುವ ಶಕ್ತಿ ಅವರಿಗಿತ್ತು. ಇಷ್ಟೆಲ್ಲ ಬಹುಶ್ರುತರಾದರೂ ಅವರು ತಮ್ಮ ಸಮಸ್ತ ಬುದ್ಧಿಶಕ್ತಿಯನ್ನು ಕೇಂದ್ರೀಕರಿಸಿದ್ದು ಸ್ವಾಮಿ ವಿವೇಕಾನಂದರ ಕೃತಿಗಳ ಮೇಲೆ. ಸ್ವಾಮಿ ವಿವೇಕಾನಂದರ ವಿಚಾರಗಳನ್ನು, ಸಮಕಾಲೀನ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವ ದೃಷ್ಟಿಯಿಂದ ಅನ್ವಯಿಸಬಹುದು ಎಂಬುದನ್ನು ರಂಗನಾಥಾನಂದರಷ್ಟು ಆಳವಾಗಿ ಬೇರೆ ಯಾರಾದರೂ ಯೋಚಿಸಿದ್ದರೇ ಎಂಬುದನ್ನು ಹೇಳುವುದು ಕಷ್ಟ.

ಸ್ವಾಮಿ ವಿವೇಕಾನಂದರ ಭಾವನೆಗಳೂ, ಆದರ್ಶಗಳೂ ರಂಗನಾಥಾನಂದರ ಇಡೀ ವ್ಯಕ್ತಿತ್ವವನ್ನು ವ್ಯಾಪಿಸಿದ್ದುವು, ಅವರ ಬದುಕು, ಚಿಂತನೆ, ಕ್ರಿಯೆಗಳನ್ನು ರೂಪಿಸಿದ್ದುವು. ಈಗಾಗಲೇ ಹೇಳಿರುವಂತೆ ವಿವೇಕಾನಂದರ ಭಾವನೆಗಳನ್ನು ಜಗತ್ತಿನಾದ್ಯಂತ ಹರಡುವುದೇ ತಮ್ಮ ಜೀವಿತೋದ್ದೇಶ ಎಂದು ರಂಗನಾಥಾನಂದರು ಭಾವಿಸಿದ್ದರು. ಇದನ್ನು ಅವರು ನೆರವೇರಿಸಿದ್ದು ಬರಿಯ ಭಾಷಣಗಳ ಮೂಲಕ ಮಾತ್ರವಲ್ಲ, ತಮ್ಮ ಜೀವನವಿಧಾನದಿಂದ ಕೂಡ. ಅವರ ಬದುಕು ಪ್ರಮಾಣಬದ್ಧವಾದದ್ದು. ಶ್ರೀರಾಮಕೃಷ್ಣರು ಹೇಳುತ್ತಿದ್ದರು: "ನೀವು ಇತರರಿಗೆ ಬೋಧಿಸಬೇಕಾದದ್ದು, ನೀವೇ ಆ ಬೋಧನೆಯನ್ನು ಆಚರಿಸುವ ಮೂಲಕ." ರಂಗನಾಥಾನಂದರು ಏನನ್ನು ಬೋಧಿಸುತ್ತಿದ್ದರೋ ಅದನ್ನೇ ಸ್ವಯಂ ಆಚರಿಸುತ್ತಿದ್ದರು.

ವಿವೇಕಾನಂದರ ಸಂದೇಶದ ಮೂರು ಮುಖ್ಯ ಕಲ್ಪನೆಗಳನ್ನೂ, ಅವು ಸ್ವಾಮಿ ರಂಗನಾಥಾನಂದರ ಜೀವನದಲ್ಲಿ ಹೇಗೆ ವ್ಯಕ್ತಗೊಂಡವು ಎಂಬುದನ್ನೂ ನೋಡೋಣ. ಸ್ವಾಮಿ ವಿವೇಕಾನಂದರ ಸಂದೇಶದ ಕೇಂದ್ರಬಿಂದು, ಆತ್ಮವು ಸ್ವಭಾವತಃ ದಿವ್ಯವಾದದ್ದು ಎಂಬುದು. ಸ್ವಾಮಿ ವಿವೇಕಾನಂದರ ಮಾತುಗಳಲ್ಲೇ ಹೇಳಬೇಕಾದರೆ: "ಪ್ರತಿಯೊಂದು ಆತ್ಮವೂ ಸ್ವಭಾವತಃ ದಿವ್ಯವಾದುದು. ಗುರಿ ಯಾವುದೆಂದರೆ ಅಂತರಂಗದ ಆ ದಿವ್ಯತೆಯನ್ನು ಪ್ರಕಟಪಡಿಸುವುದು." ಈ ಉದಾತ್ತ ತತ್ತ್ವವು ಮಾನವ ಜೀವನದ ವಿವಿಧಕ್ಷೇತ್ರಗಳಲ್ಲಿ ಫಲಪ್ರದವಾಗಿ ಅನ್ವಯಗೊಳ್ಳುವ ಸಾಧ್ಯತೆಗಳು ಅನಂತವಾಗಿವೆ. ಒಬ್ಬ ವ್ಯಕ್ತಿಯು ಸಾಮಾಜಿಕವಾಗಿ ಆರ್ಥಿಕವಾಗಿ ಯಾವುದೇ ಸ್ತರದಲ್ಲಿರಲಿ, ಮೇಲಿನ ಭಾವನೆ ಅವನಲ್ಲಿ ದೃಢವಾಗಿ ಬೇರೂರಿದರೆ, ಅವನಿಗೆ ಅಂತರ್ಗತವಾದ, ಪರಭಾರೆ ಮಾಡಲಾಗದ ಗಾಂಭೀರ್ಯವನ್ನು ನೀಡುತ್ತದೆ. ಬದುಕಿನ ಬೇರೆ ಬೇರೆ ಸ್ತರಗಳಲ್ಲಿದ್ದ ಜನರೊಂದಿಗೆ ವ್ಯವಹರಿಸುವಾಗ ರಂಗನಾಥಾನಂದರಿಗೆ ಮಾರ್ಗದರ್ಶಿ ಸೂತ್ರವಾಗಿದ್ದದ್ದು ವಿವೇಕಾನಂದರು ನೀಡಿದ್ದ ಈ ಉದಾತ್ತ ತತ್ತ್ವವೇ.

ಪ್ರತಿಯೊಬ್ಬರನ್ನೂ ಅವರು ಗೌರವದಿಂದ ಕಂಡರು. ಪ್ರತಿಯೊಬ್ಬರೂ—ಗುಡಿಸುವವನಿಂದ ಹಿಡಿದು ಉನ್ನತ ಹುದ್ದೆಯಲ್ಲಿದ್ದ ಸರ್ಕಾರೀ ಅಧಿಕಾರಿಯವರೆಗೆ ಪ್ರತಿಯೊಬ್ಬರೂ—ಅವರ ದೃಷ್ಟಿಯಲ್ಲಿ ಸಮಾನರಾಗಿದ್ದರು. ದೆಹಲಿಯಲ್ಲಿ ಆಶ್ರಮದ ಅಧ್ಯಕ್ಷರಾಗಿದ್ದಾಗ, ಮೊದಲ ಪಂಕ್ತಿಯವರ ಊಟ ಮುಗಿದ ಮೇಲೆ ಎರಡನೆಯ ಪಂಕ್ತಿಯಲ್ಲಿ ಕುಳಿತವರ ಜೊತೆಯಲ್ಲಿ ಅವರು ಊಟ ಮಾಡುತ್ತಿದ್ದರು. ಅದಕ್ಕೆ ಕಾರಣ ಅಡುಗೆಯವರೂ ಇತರ ಕೆಲಸದವರೂ ಆ ಪಂಕ್ತಿಯಲ್ಲಿರುತ್ತಿದ್ದುದು! ಎಲ್ಲ ಆಳುಕಾಳುಗಳಿಗೂ (ಅವರನ್ನು ಪರಿಚಾರಕರು, **helpers**, ಸಹಾಯಕರು ಎಂದು ಕರೆಯಲಾಗುತ್ತಿತ್ತು) ಹಾಸಿಗೆ, ಮಂಚ ಮೊದಲಾದುವುಗಳಲ್ಲದೆ ಫ್ಯಾನ್ ಕೂಡ ಇರುತ್ತಿದ್ದ ಕೊಠಡಿಗಳಿದ್ದುವು. ತಮ್ಮ ಬಳಿಗೆ ಬಂದ ಯಾರನ್ನೂ ಅವರು ಉಪೇಕ್ಷಿಸುತ್ತಿರಲಿಲ್ಲ. ಅವರಿಗೆ ಒಬ್ಬ ಬ್ರಹ್ಮಚಾರಿಯೋ ಬಡವನೋ ಯಾರೇ ಆಗಿರಲಿ, ಕಾಲು ಮುಟ್ಟಿ ನಮಸ್ಕರಿಸಿದಾಗ, ತಾವು ಏನೇ ಕೆಲಸ ಮಾಡುತ್ತಿರಲಿ, ಎಂಥ ದೊಡ್ಡ ಮನುಷ್ಯರ ಜೊತೆ ಮಾತನಾಡುತ್ತಿರಲಿ, ಹಾಗೆ ನಮಸ್ಕರಿಸಿದವರಿಗೆ ಕೈಮುಗಿಯುತ್ತಿದ್ದರು. ಇಲ್ಲವೇ ತಲೆಯನ್ನಾದರೂ ಅವರ ಕಡೆ ತಿರುಗಿಸಿ ಬಾಗುತ್ತಿದ್ದರು. ಹಿರಿಯರಾದ ಸ್ವಾಮಿಗಳು ತಮಗೆ ನಮಸ್ಕರಿಸಿದಾಗ ರಂಗನಾಥಾನಂದರು ಅವರ ಕೈ ಕುಲುಕುತ್ತಿದ್ದರು—'ನಾವೆಲ್ಲ ಸಮಾನ' ಎಂದು ಹೇಳುವ ಅವರದೇ ಆದ ವಿಧಾನ ಅದು!

ಉತ್ತರ ಪ್ರದೇಶದ ಒಂದು ವಿಶ್ವವಿದ್ಯಾನಿಲಯದ ಕುಲಪತಿಗಳು ಸ್ವಾಮಿಜಿಯನ್ನು ಒಮ್ಮೆ ಮಾತುಕತೆಗೆ ಆಹ್ವಾನಿಸಿದರು. ಅವರ ದಿವಾನಖಾನೆಯಲ್ಲಿ ಪ್ರಾಧ್ಯಾಪಕರೂ, ಉಪಾಧ್ಯಾಯರೂ ಅವರ ಕುಟುಂಬ ವರ್ಗದವರೂ ಕಿಕ್ಕಿರಿದು ತುಂಬಿದ್ದರು. ಕುಲಪತಿಗಳ ಅಡುಗೆಯವನು—ಏನೇನೂ ಓದಿಲ್ಲದವನು, ಹಳ್ಳಿಯ ಬ್ರಾಹ್ಮಣ, ಒಂದು ಮೂಲೆಯಲ್ಲಿ ಮುದುಡಿಕೊಂಡು ಕುಳಿತಿದ್ದ. ರಂಗನಾಥಾನಂದರು ಇಂಗ್ಲಿಷಿನಲ್ಲಿ ಮಾತನಾಡುತ್ತಿದ್ದವರು, ಮಧ್ಯೆಮಧ್ಯೆ ನಿಲ್ಲಿಸಿ, ತಮ್ಮ ಮಾತಿನ ಸಾರಾಂಶವನ್ನು ಅಡುಗೆಯವನಿಗೆ ಹಿಂದಿಯಲ್ಲಿ ವಿವರಿಸಿ ಹೇಳುತ್ತಿದ್ದರು! ಅಲ್ಲಿ ನೆರೆದಿದ್ದವರಿಗೆಲ್ಲ ಸ್ವಾಮಿಜಿಯ ಈ ವರ್ತನೆ ಎಷ್ಟು ಸಂತೋಷ ನೀಡಿತು ಎಂಬುದನ್ನು ಹೇಳಬೇಕಾಗಿಯೇ ಇಲ್ಲ.

ಆತ್ಮವು ಸತ್ವತಃ ದಿವ್ಯವಾದದ್ದು ಎಂಬುದು ಸ್ವಾಮಿ ವಿವೇಕಾನಂದರ ಸಿದ್ಧಾಂತ. ಅದಕ್ಕೆ ಉಪಸಿದ್ಧಾಂತವಾಗಿ ಅವರು, ಆತ್ಮಶ್ರದ್ಧೆ, ಶಕ್ತಿ ಮತ್ತು ನಿರ್ಭೀತಿ ಇವುಗಳ ಅಸ್ತಿ

ಭಾರದ ಮೇಲೆ ಕಟ್ಟಿದ ಜೀವನವನ್ನು ಕುರಿತ ಇತ್ಯಾತ್ಮಕ ಭಾವನೆಯನ್ನು ಬೆಳಸಿಕೊಳ್ಳಬೇಕು ಎಂದು ಹೇಳುತ್ತಿದ್ದರು. ರಂಗನಾಥಾನಂದಜಿಯವರು ಈ ಸಿದ್ಧಾಂತದ ಪೂರ್ಣ ಪ್ರಮಾಣದ ಸಾಕಾರಮೂರ್ತಿಯಾಗಿದ್ದರು. ತಮ್ಮ ಅಂತ ರಂಗದ ಯಾವುದೋ ಭಾಗದಲ್ಲಿ ಅವರು ಆಧ್ಯಾತ್ಮಿಕ ಶಕ್ತಿಯ ಬುಗ್ಗೆಯನ್ನು ನಿರಂತರ ಉಕ್ಕಿಸುವ ಕಲೆಯಲ್ಲಿ ಪರಿಣತಿ ಪಡೆದಿದ್ದರು. ಅವರ ಅದ್ಭುತವಾದ ಆತ್ಮ-ಶ್ರದ್ಧೆ, ಅಂತರಂಗದ ಶಕ್ತಿ, ನಿರ್ಭೀತಿ, ಜೀವನವನ್ನು ಕುರಿತಂತೆ ಸದಾಕಾಲ ಇತ್ಯಾತ್ಮಕ ಭಾವನೆ ಇವುಗಳ ರಹಸ್ಯ ಅವರ ಆ ಕಲಾ ಪರಿಣತಿಯೇ. ತುಂಬ ಚಿಕ್ಕ ವಯಸ್ಸಿನಲ್ಲೇ ದೊಡ್ಡ ಪ್ರಮಾಣದ ಜವಾಬ್ದಾರಿಗಳನ್ನು ವಹಿಸಿಕೊಳ್ಳುವುದಕ್ಕೂ, ಜೀವನದಲ್ಲಿ ಅಸಂಖ್ಯಾತ ಸಮಸ್ಯೆಗಳನ್ನೂ ಸಂದಿಗ್ಧತೆಗಳನ್ನು ಎದುರಿಸುವುದಕ್ಕೂ ಅವರಿಗೆ ಶಕ್ತಿ ನೀಡಿದ್ದು ಮೇಲೆ ಹೇಳಿದ ಅವರ ಅಂತರಂಗದ ಗುಣಗಳೇ. ರಂಗೂನಿನ ರಾಮಕೃಷ್ಣ ಆಶ್ರಮದ ಜವಾಬ್ದಾರಿಯನ್ನು ವಹಿಸಿಕೊಂಡಾಗ ಅವರ ವಯಸ್ಸು ಕೇವಲ ೩೧.

೧೯೬೮ರಿಂದ ೧೯೭೨ರ ಅವಧಿಯಲ್ಲಿ ಅವರು ಪಶ್ಚಿಮದ ಐವತ್ತಕ್ಕೂ ಹೆಚ್ಚಿನ ದೇಶಗಳಲ್ಲಿ ಪ್ರವಾಸ ಕೈಗೊಂಡಿದ್ದರು. ಮತ್ತೆ ೧೯೭೨ರಿಂದ ೧೯೮೬ರ ಅವಧಿಯಲ್ಲಿ, ಅಮೆರಿಕ, ಆಸ್ಟ್ರೇಲಿಯ ಮತ್ತಿತರ ದೇಶಗಳಲ್ಲಿ ಸಂಚರಿಸಿ ರಾಮಕೃಷ್ಣ–ವಿವೇಕಾನಂದರು ವ್ಯಾಖ್ಯಾನಿಸಿದ್ದಂತೆ ವೇದಾಂತವನ್ನು ಪ್ರಚಾರ ಮಾಡಿ ಜನತೆಯ ಮನಸ್ಸನ್ನು ಜಾಗೃತಗೊಳಿಸಿದರು. ಕೇವಲ ಅಮೆರಿಕದಲ್ಲೇ ಅವರು ಮುನ್ನೂರಕ್ಕೂ ಹೆಚ್ಚು ಉಪನ್ಯಾಸಗಳನ್ನು ನೀಡಿದರು. ಒಂದೇ ಸಮನೆ ಪ್ರಯಾಣ ಮಾಡುವುದು, ಉಪನ್ಯಾಸಗಳನ್ನು ನೀಡುವುದು, ಜನರೊಡನೆ ಮಾತುಕತೆಯಾಡುವುದು ಇವು ಯಾವುವೂ ಅವರಿಗೆ ಬಳಲಿಕೆ ಯುಂಟುಮಾಡಲೇ ಇಲ್ಲ! ಅವರು ಆಕಳಿಸಿದ್ದನ್ನಾಗಲಿ, ಮಂಕುಕವಿದಂತೆಯೊ, ಉತ್ಸಾಹಶೂನ್ಯರಾಗಿಯೋ ಇದ್ದುದನ್ನಾಗಲಿ ನೋಡಿದವರೇ ಯಾರೂ ಇಲ್ಲ. ಅವರು ಸದಾ ಎಚ್ಚರದಿಂದ, ಉತ್ಸಾಹದಿಂದ, ಸಂತೋಷದಿಂದ ಕೂಡಿದವರಾಗಿಯೇ ಇದ್ದವರು.

ಅವರಿಗೆ ತಮ್ಮಲ್ಲಿ ಶ್ರದ್ಧೆಯಿದ್ದಂತೆಯೇ ಇತರರಲ್ಲಿ ನಂಬಿಕೆಯೂ ಇತ್ತು. ಪ್ರತಿಯೊಬ್ಬರಲ್ಲಿಯೂ ಅಗಾಧವಾದ ಸಾಧ್ಯತೆಗಳಿರುವುದನ್ನು ಅವರು ಕಂಡುಕೊಂಡಿದ್ದರು. ತಮ್ಮಲ್ಲಿ ಅಡಗಿರುವ ಶಕ್ತಿಗಳನ್ನು ಬೆಳಸಿಕೊಳ್ಳುವಂತೆ ಜನರನ್ನು ಪ್ರೋತ್ಸಾಹಿಸುತ್ತಿದ್ದರು. ಯಾರಾದರೂ ಏನಾದರೂ ಒಳ್ಳೆಯದು ಮಾಡುವುದನ್ನು ಕಂಡರೆ ಅವರನ್ನು ಮುಕ್ತವಾಗಿ ಮೆಚ್ಚುತ್ತಿದ್ದರು. ಇತರರ ವಿಷಯದಲ್ಲಿ ಒಳ್ಳೆಯದನ್ನು ಕೇಳುವುದಕ್ಕಿಂತ ಬೇರಾವುದೂ ಅವರಿಗೆ ಹೆಚ್ಚಿನ ಸಂತೋಷವನ್ನು ನೀಡುತ್ತಿರಲಿಲ್ಲ. ಇತರರ ವಿಷಯದಲ್ಲಿ ಕೆಟ್ಟದ್ದನ್ನು ಹೇಳುವಾಗ ಕಾಣಿಸಿಕೊಳ್ಳುವ ನಿಷೇಧಾತ್ಮಕ ಭಾವನೆ ಅವರಿಗೆ ಎಳ್ಳಷ್ಟೂ ಹಿಡಿಸುತ್ತಿರಲಿಲ್ಲ.

ಅವರು ಇತರ ವ್ಯಕ್ತಿಗಳ ಬಗ್ಗೆ ಮಾತ್ರವಲ್ಲ, ಇತರ ವಸ್ತುಗಳ ವಿಷಯದಲ್ಲೂ ಇತ್ಯಾತ್ಮಕ ಭಾವನೆಯನ್ನೇ ತಾಳಿರುತ್ತಿದ್ದರು. ಅನೇಕ ಪುಸ್ತಕಗಳು, ನಿಯತಕಾಲಿಕೆಗಳು ಅವರಲ್ಲಿಗೆ ಬರುತ್ತಿದ್ದುವು. ಅವೆಲ್ಲವನ್ನು ಓದಲು ಸಾಧ್ಯವಾಗುತ್ತಿರಲಿಲ್ಲವಾಗಿ ಅವುಗಳಲ್ಲಿ ಕೆಲವನ್ನು ನನಗೆ ಕೊಡುತ್ತಿದ್ದರು. ಮರುದಿನ ಅವುಗಳ ಬಗ್ಗೆ ನನ್ನ ಅಭಿಪ್ರಾಯ ಕೇಳುತ್ತಿದ್ದರು. ಅವುಗಳಲ್ಲಿ ಬಹುಪಾಲು ಕೆಲಸಕ್ಕೆ ಬಾರದವು. ಅವರಿಗೆ ನಾನು ಹಾಗೆ ಹೇಳಿಯೂಬಿಡುತ್ತಿದ್ದೆ. ಅವರು ಮೌನ ತಾಳುತ್ತಿದ್ದರು. ಆಗ ನನಗೆ ತಿಳಿಯುತ್ತಿತ್ತು, ನನ್ನ ಅಭಿಪ್ರಾಯ ಅವರಿಗೆ ಹಿಡಿಸಲಿಲ್ಲ ಎಂದು. ಅದರಿಂದ ನಾನು ಪಾಠ ಕಲಿತೆ. ಮುಂದೆ ಅವರು ಹಾಗೆ ಪುಸ್ತಕಗಳನ್ನೋ ನಿಯತಕಾಲಿಕೆಗಳನ್ನೋ ಕೊಟ್ಟಾಗ ಅವುಗಳಲ್ಲಿ ಒಂದೋ ಎರಡೋ ಒಳ್ಳೆಯ ಅಂಶಗಳನ್ನು ಗುರುತಿಸುವುದನ್ನು ರೂಢಿಸಿಕೊಂಡು ಅವರು ನನ್ನ ಅಭಿಪ್ರಾಯ ಕೇಳಿದಾಗ "ಒಂದೆರಡು ಒಳ್ಳೆಯ ಅಂಶಗಳಿವೆ, ಆದರೆ... " ಎನ್ನುತ್ತಿದ್ದಂತೆಯೇ ನಾನು ಮಾತು ಮುಂದುವರಿಸಲು ಅವರು ಬಿಡುತ್ತಿರಲಿಲ್ಲ. "ಅದರಲ್ಲಿ ಒಂದೆರಡು ಒಳ್ಳೆಯ ಅಂಶಗಳಿವೆ, ಒಳ್ಳೆಯದು, ಒಳ್ಳೆಯದು" ಎಂದು ಹೇಳಿ ಮಾತುಕತೆ ಮುಗಿಸುತ್ತಿದ್ದರು! ಅವರಿಗೆ ತೀಕ್ಷ್ಣವಾದ ವಿಮರ್ಶಾಶಕ್ತಿ ಇರಲಿಲ್ಲ ಎಂಬುದು ಇದರ ಅರ್ಥ ಅಲ್ಲ. ಜನ ಪ್ರೀತಿಯಿಂದಲೋ ಗೌರವದಿಂದಲೋ ಕಳುಹಿಸಿದ ವಸ್ತುಗಳಲ್ಲಿ ಒಳ್ಳೆಯದನ್ನು ನೋಡಬೇಕು ಎಂಬುದು ಅವರ ಅಭಿಪ್ರಾಯ.

ರಾಮಕೃಷ್ಣ ಮಹಾಸಂಘಕ್ಕೆ ಸ್ವಾಮಿ ವಿವೇಕಾನಂದರು ಅವಳಿ ಧ್ಯೇಯಗಳನ್ನು ನೀಡಿದ್ದರು (ಎಲ್ಲ ಭಾರತೀಯರಿಗೂ ಏಕೆ, ಸಮಸ್ತ ಮಾನವತೆಗೂ, ಅವು ಧ್ಯೇಯಗಳಾಗುವುದರಲ್ಲಿ ದೇಶದ ಕಲ್ಯಾಣ ಅಡಗಿದೆ): **ಆತ್ಮನೋ ಮೋಕ್ಷಾರ್ಥಂ ಜಗದ್–ಹಿತಾಯ ಚ**—ವ್ಯಕ್ತಿಯ ಮೋಕ್ಷ ಮತ್ತು ಜಗತ್ತಿನ ಕಲ್ಯಾಣ. ಎರಡನೆಯ ಧ್ಯೇಯಸಾಧನೆಗೆ—ಜಗತ್ತಿನ ಕಲ್ಯಾಣಕ್ಕೆ ಸ್ವಾಮಿಜಿ ಕರ್ಮಯೋಗವನ್ನು ಬೋಧಿಸಿದರು. ಕರ್ಮಯೋಗ ಎರಡು ತತ್ತ್ವಗಳ ಮೇಲೆ ನಿಂತಿದೆ. ಮೊದಲನೆಯದು: 'ಕೆಲಸವೇ ಪೂಜೆ' ಎಂದರೆ, ಎಲ್ಲ ಚಟುವಟಿಕೆಗಳೂ ಪರಮಪುರುಷನಿಗೆ ಸಲ್ಲಿಸುವ ಪೂಜೆ ಎಂಬಂತೆ ನಡೆಯಬೇಕು. ಎರಡನೆಯ ತತ್ತ್ವ **ಶಿವಜ್ಞಾನೇ ಜೀವಸೇವಾ** ಮಾನವನಿಗೆ ಸಲ್ಲಿಸುವ ಸೇವೆಯೇ ಭಗವಂತನಿಗೆ ಸಲ್ಲುವ ಪೂಜೆ.

ಕರ್ಮಯೋಗದ ಮೇಲಿನ ಎರಡು ಸೂತ್ರಗಳಿಗೆ ಅತ್ಯುತ್ತಮ ಭಾಷ್ಯದಂತಿದ್ದರು ಸ್ವಾಮಿ ರಂಗನಾಥಾನಂದರು. ಆಧುನಿಕ ಯುಗದ ಮಹಾನ್ ಕರ್ಮಯೋಗಿಗಳಲ್ಲಿ ಅವರು ಒಬ್ಬರು. ಅವರು ತಮ್ಮ ಹದಿನಾರನೆಯ ವರ್ಷದಲ್ಲಿ ರಾಮ

ಕೃಷ್ಣ ಆಶ್ರಮವನ್ನು ಸೇರಿದರಷ್ಟೆ. ಆಗಿನಿಂದ ತಮ್ಮ ೯೬ನೆಯ ವಯಸ್ಸಿನವರೆಗೂ ಅವರು ಜಗತ್ತಿನ ಕಲ್ಯಾಣಕ್ಕಾಗಿ ಎಡೆಬಿಡದೆ ದುಡಿದರು. ೯೬ನೆಯ ವಯಸ್ಸಿನಲ್ಲೂ, ಅನೇಕ ವ್ಯಾಧಿಗಳಿಂದ ನರಳುತ್ತಿದ್ದರೂ, ಅನೇಕ ಚಟುವಟಿಕೆಗಳಲ್ಲಿ—ಅಧಿಕೃತ ಸಭೆಗಳ ಅಧ್ಯಕ್ಷತೆ ವಹಿಸುವುದು, ಆಧ್ಯಾತ್ಮಿಕ ಮಾರ್ಗ ದರ್ಶನ ನೀಡುವುದು, ತಮ್ಮ ಬಳಿಗೆ ಬರುವ ಅನೇಕಾನೇಕ ಜೀವಿಗಳಿಗೆ ಸಾಂತ್ವನ ನೀಡುವುದು ಇತ್ಯಾದಿ ಚಟುವಟಿಕೆ ಗಳಲ್ಲಿ ತೊಡಗಿಯೇ ಇರುತ್ತಿದ್ದರು.

ಅವರ ಕಾರ್ಯಕ್ಷೇತ್ರ ಮಧ್ಯಮ ವರ್ಗದ ಜನರಿಗೆ ಸೀಮಿತವಾಗಿದ್ದರೂ ಬಡವರ, ದಲಿತರ ಬಗೆಗೆ ಅವರ ಕಾಳಜಿ ತೀವ್ರವಾದದ್ದಾಗಿತ್ತು. ಬಡವರಿಗಾಗಿ ರಾಮಕೃಷ್ಣ ಮಿಷನ್ ರೂಪಿಸುತ್ತಿದ್ದ ಕಾರ್ಯಕ್ರಮಗಳಲ್ಲಿ ಅವರಿಗೆ ತುಂಬ ಆಸಕ್ತಿಯಿತ್ತು. ಚತ್ತೀಸ್‌ಘಡ್, ಝಾರ್ಖಂಡ್, ಅರುಣಾಚಲ ಪ್ರದೇಶ ಮತ್ತಿತರ ಕಡೆಗಳಲ್ಲಿ ಬುಡಕಟ್ಟು ಜನಾಂಗದವರಿಗೆ ತಮ್ಮ ಸಂಸ್ಥೆಯು ಸಲ್ಲಿಸುತ್ತಿರುವ ಸೇವಾಕಾರ್ಯ ಅವರಿಗೆ ಪ್ರಿಯವಾಗಿತ್ತು. ಕೆಲವು ವರ್ಷಗಳ ಹಿಂದೆ ಉತ್ತರ ಕೇರಳದಲ್ಲಿ ತುಂಬ ಬಡವರಾದ ಬುಡಕಟ್ಟು ಜನಾಂಗದವರಿಗೆ ಸೇವೆ ಸಲ್ಲಿಸುತ್ತಿದ್ದ ಸಂಸ್ಥೆಯೊಂದು ರಂಗನಾಥಾನಂದಜಿ ಅವರಿಗೆ ಬರೆದು ಆರ್ಥಿಕ ಸಹಾಯ ಕೋರಿತು. ಆದರೆ ಆ ಸಂಸ್ಥೆ ರಾಮಕೃಷ್ಣ ಮಿಷನ್ನಿನ ಭಾಗವಾಗಿರಲಿಲ್ಲವಾಗಿ ಅದಕ್ಕೆ ಸಹಾಯ ನೀಡುವ ಬಗ್ಗೆ ಆಕ್ಷೇಪಣೆಗಳು ಬಂದರೂ, ಸ್ವಾಮಿಜಿ ಆ ಆಕ್ಷೇಪಣೆಗಳನ್ನು ತಳ್ಳಿಹಾಕಿ ಆ ಸಂಸ್ಥೆಗೆ ಗಣನೀಯವಾದ ಮೊತ್ತವನ್ನು ನೀಡಿ ಪ್ರೋತ್ಸಾಹಿಸಿದರು.

ಸ್ತ್ರೀಯರ ಯೋಗಕ್ಷೇಮದ ಬಗ್ಗೆ ಅವರಿಗಿದ್ದ ಕಾಳಜಿ ಅಷ್ಟಿಷ್ಟಲ್ಲ. ನೂರಾರು ಮಹಿಳೆಯರೂ, ಅನೇಕ ಮಹಿಳಾ ಸಂಸ್ಥೆಗಳೂ ಅವರಿಂದ ನೆರವು ಪಡೆದಿವೆ. ೧೯೫೪ರಲ್ಲಿ ಬೇಲೂರು ಮಠವು ಮಹಿಳೆಯರಿಗಾಗಿ ಪ್ರತ್ಯೇಕ ಮಠವನ್ನು ತೆರೆಯಿತು. ಅದು ಶಾರದಾಮಠ ಎಂದು ಹೆಸರು ಪಡೆಯಿತು. ಕ್ರಮೇಣ ಅದೊಂದು ಸ್ವತಂತ್ರ ಸಂಸ್ಥೆಯೇ ಆಯಿತು. ತಮ್ಮ ಜೀವಿತದ ಕೊನೆಯ ಗಳಿಗೆಯವರೆಗೂ ಸ್ವಾಮಿ ರಂಗನಾಥಾನಂದರು ಆ ಮಠಕ್ಕೂ, ಅದರ ಸೇವಾಸಂಸ್ಥೆಯಾದ ರಾಮಕೃಷ್ಣ–ಶಾರದಾ ಮಿಷನ್‌ಗೂ ಗಣನೀಯವಾದ ರೀತಿಯಲ್ಲಿ ನೆರವು ನೀಡುತ್ತಾ ಅದರ ಆಧಾರಸ್ತಂಭಗಳಲ್ಲಿ ಒಂದಾಗಿದ್ದರು.

ಈ ಸಂದರ್ಭದಲ್ಲಿ ಸ್ವಾಮಿಜಿಯವರ ವ್ಯಕ್ತಿತ್ವದ ಇನ್ನೆರಡು ಲಕ್ಷಣಗಳನ್ನೂ ಹೇಳಬೇಕಾಗಿದೆ. ಅವರು ಜಗತ್ತಿನಾದ್ಯಂತ ಎಷ್ಟೋ ಸಲ ಸುತ್ತಿ ಎಲ್ಲ ರೀತಿಯ ಜನರೊಂದಿಗೂ ಬೆರೆಯುತ್ತಿದ್ದರೂ ಅವರು ನಿಜವಾದ ಸಂನ್ಯಾಸದ ಎರಡು ನಿಯಮಗಳನ್ನು—ಚಾರಿತ್ರ್ಯಶುದ್ಧಿ ಮತ್ತು ನಿರ್ಧನತೆ—ಕಟ್ಟುನಿಟ್ಟಾಗಿ ಪಾಲಿಸಿದರು. ತಮಗೆ ಎಷ್ಟೇ ಹಣ ಬರಲಿ ಅದನ್ನು ಆದಷ್ಟು ಬೇಗ ಉದಾರವಾಗಿ ಹಂಚಿಬಿಡುತ್ತಿದ್ದರು. ಸ್ವದೇಶದಲ್ಲಾಗಲಿ, ವಿದೇಶದಲ್ಲಾಗಲಿ, ಪ್ರಯಾಣ ಮಾಡುವಾಗ ಅವರು ಹಣವನ್ನು ಎಂದೂ ಒಯ್ಯುತ್ತಿರಲಿಲ್ಲ. ತಮ್ಮ ಮಿತ್ರರು ನೀಡಬಹುದಾದ ಹಣವನ್ನು ಅವಲಂಬಿಸಿರುತ್ತಿದ್ದರು. ವೈಯಕ್ತಿಕ ಜೀವನದಲ್ಲೂ ಅಷ್ಟೆ, ತೀರ ಅಗತ್ಯವಾದ ವಸ್ತುಗಳನ್ನು ಮಾತ್ರ ಇಟ್ಟುಕೊಂಡಿರುತ್ತಿದ್ದರು. ಅವರು ಎಷ್ಟು ಸರಳವಾದ ಜೀವನವನ್ನು ನಡೆಸುತ್ತಿದ್ದರು ಎಂದರೆ ಅನೇಕರಿಗೆ ಅವರನ್ನು ಅನುಸರಿಸುವುದು ಕಷ್ಟವಾಗುತ್ತದೆ. ಅವರ ವೈರಾಗ್ಯಜೀವನಕ್ಕೆ ನಿದರ್ಶನ ಅದು. ಕೇಳುಗರ ಮನಸ್ಸಿನ ಮೇಲೆ ಪರಿಣಾಮ ಬೀರುವುದು ವ್ಯಕ್ತಿಯ ವಾಗ್ಮಿತೆಯಲ್ಲ, ಅವನ ಚಾರಿತ್ರ್ಯ ಎಂದು ಸ್ವಾಮಿ ವಿವೇಕಾನಂದರು ಸೋದರಿ ನಿವೇದಿತಾಳಿಗೆ ಒಮ್ಮೆ ಹೇಳಿದ್ದುಂಟು. ರಂಗನಾಥಾನಂದಜಿ ಅವರ ವಿಷಯಕ್ಕೂ ಈ ಮಾತು ಸತ್ಯ.

ಅವರ ಕಟ್ಟುನಿಟ್ಟಾದ ಸಂನ್ಯಾಸ ಜೀವನ, ತೀಕ್ಷ್ಣವಾದ ಬುದ್ಧಿಮತ್ತೆ ಮತ್ತು ಕಾರ್ಯದಕ್ಷತೆಗಳ ಹಿಂದೆ ಪ್ರೀತಿ ತುಂಬಿದ ಒಂದು ಮೃದು ಹೃದಯವಿತ್ತು. ಅವರು ಬೆಳೆಸಿದ ಆತ್ಮೀಯವಾದ ಸ್ನೇಹಗಳು ಜೀವನಪರ್ಯಂತ ನಿಷ್ಠೆಗಳಾಗಿ ಉಳಿದುವು. ಅವರ ಪ್ರೀತಿಯಲ್ಲಿ ಭಾವುಕತೆ ಉಕ್ಕಿ ಹರಿಯುತ್ತಿರಲಿಲ್ಲ. ಕಾಲ ದೇಶಗಳು ಕತ್ತರಿಸಲಾಗದ ಗಟ್ಟಿಯಾದ ಬಂಧವಾಗಿರುತ್ತಿತ್ತು ಅವರ ಪ್ರೀತಿ.

ಸಮಕಾಲೀನ ಜಗತ್ತಿನಲ್ಲಿ ಮಾನವ ಕ್ಷೇಮಕ್ಕೆ ಗಣನೀಯವಾದ ಕಾಣಿಕೆಗಳನ್ನು ರಂಗನಾಥಾನಂದಜಿ ನೀಡಿದ್ದಾರೆ. ಅವರ ಅಂತಹ ಕಾಣಿಕೆಯಲ್ಲಿ ಅತ್ಯಂತ ಪ್ರಸಿದ್ಧವಾದದ್ದು ಎಂದರೆ ಅವರು ವಿದೇಶಗಳಲ್ಲಿ ಭಾರತದ 'ಸಾಂಸ್ಕೃತಿಕ ರಾಯಭಾರಿ'ಯಾಗಿ ವಹಿಸಿದ ಪಾತ್ರ. ಭಾರತ ಎಂದರೆ ಹಾವಾಡಿಗರು, ಭಿಕ್ಷುಕರು ಇವರುಗಳಿಂದ, ಗೋಪೂಜೆ, ರೋಗ ರುಜಿನಗಳು ಇವುಗಳಿಂದ ತುಂಬಿದ ದೇಶ ಎಂದು ಪರಿಗಣಿತವಾಗಿದ್ದ ಕಾಲದಲ್ಲಿ ರಂಗನಾಥಾನಂದರು ಭಾರತದ ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆಗಳನ್ನು ತಮ್ಮ ವಾಗ್ಮಿತೆಯಿಂದ ವ್ಯಾಖ್ಯಾನಿಸಿದರು. ಹಾಗೆ ಮಾಡಿ ಪಶ್ಚಿಮದ ಬುದ್ಧಿಶಾಲಿಗಳ ಮನಸ್ಸಿನಲ್ಲಿ ಭಾರತದ ಉತ್ತಮ ಚಿತ್ರ ಮೂಡುವಂತಾಗಲು ಕಾರಣರಾದರು. ವಿರೋಧಾಭಾಸದ ಸಂಗತಿ ಎಂದರೆ ಆ ದೇಶಗಳಲ್ಲಿ ನೆಲಸಿದ್ದ ಅನೇಕ ಭಾರತೀಯರಿಗೇ ತಮ್ಮ ಮಾತೃಭೂಮಿಯ ಬಗ್ಗೆ ಸಾಕಷ್ಟು ತಿಳಿವಳಿಕೆಯಿಲ್ಲದೆ ಕೀಳರಿಮೆಯಿಂದ ನರಳುತ್ತಿದ್ದುದು. ಸ್ವಾಮಿ ರಂಗನಾಥಾನಂದರ ಪ್ರವಚನಗಳು ಅಂಥವರ ಕಣ್ಣನ್ನೂ ತೆರೆದುವು. ಭಾರತದಲ್ಲಿ ಕೂಡ ಅನೇಕ ಬುದ್ಧಿಜೀವಿಗಳು, ಸರ್ಕಾರಿ ಅಧಿಕಾರಿಗಳು, ಅದರಲ್ಲೂ ಐ.ಎ.ಎಸ್., ಐ.ಪಿ.ಎಸ್. ಮುಂತಾದ ಸೇವೆಯಲ್ಲಿರುವವರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಭಾರತದ ಸಂಸ್ಕೃತಿಯನ್ನು ಅರಿಯುವುದಕ್ಕೆ ರಂಗನಾಥಾನಂದರ

ಉಪನ್ಯಾಸಗಳೂ ಪುಸ್ತಕಗಳೂ ನೆರವಾಗಿವೆ.

ಅಷ್ಟೇ ಮುಖ್ಯವಾದ ಅವರ ಮತ್ತೊಂದು ಕಾಣಿಕೆ ಯೆಂದರೆ ಸ್ವಾಮಿ ವಿವೇಕಾನಂದರ ಮಹಾನ್ ಚಿಂತನೆಗಳನ್ನು ವ್ಯಾಖ್ಯಾನಿಸಿ ಜನಪ್ರಿಯಗೊಳಿಸಿದುದು. ವಾಸ್ತವವಾಗಿ, ಯಾವುದೋ ಗ್ರಂಥಗಳಲ್ಲಿ ಹುದುಗಿದ್ದ ವೇದಾಂತದ ಜೀವ ಪೋಷಕ ನಿತ್ಯಸತ್ಯಗಳನ್ನು ಹೊರಕ್ಕೆ ತಂದು ಆಧುನಿಕವಾದ ಭಾಷೆಯಲ್ಲಿ ಅವನ್ನು ವಿವರಿಸಿ ಬದುಕಿನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅವು ಹೇಗೆ ನೆರವಾಗಬಲ್ಲುವು ಎಂಬುದನ್ನು ತೋರಿಸಿದ ಮೊದಲ ವ್ಯಕ್ತಿ ಎಂಬ ಗೌರವಕ್ಕೆ ಪಾತ್ರ ರಾಗಿರುವವರು ಸ್ವಾಮಿ ವಿವೇಕಾನಂದರೇ. ವಿವೇಕಾನಂದರ ಸಂದೇಶಗಳಲ್ಲಿ ಅಡಗಿರುವ ದೀಪಸದೃಶ ಭಾವನೆಗಳನ್ನು ಜನಪ್ರಿಯಗೊಳಿಸುವ. ಅವಕ್ಕೆ ಮತ್ತೆ ಚೈತನ್ಯವನ್ನು ತುಂಬುವ, ಆಧುನಿಕ ವಿಜ್ಞಾನ ಮತ್ತು ಆರ್ಥಿಕ–ಸಾಮಾಜಿಕ ಜೀವನ ಗಳು ವೇಗ ವೇಗ ಬದಲಾಗುತ್ತಿರುವ ಸಂದರ್ಭದಲ್ಲಿ ಅವುಗಳನ್ನು ಅರ್ಥೈಸುವ ಆವಶ್ಯಕತೆಯಿತ್ತು. ಸ್ವಾಮಿ ರಂಗನಾಥಾನಂದರು ತಮ್ಮ ಅಂತರಂಗದ ಸಂಪತ್ತಿನ ಬಹು ಭಾಗವನ್ನು ವಿನಿಯೋಗಿಸಿದ್ದು ಈ ಕಾರ್ಯಕ್ಕೇ.

ಭಾರತದಲ್ಲಿ ವಿಜ್ಞಾನ ಮತ್ತು ಧರ್ಮದ, ಅಥವಾ ಸರಿಯಾಗಿ ಹೇಳಬೇಕೆಂದರೆ ವಿಜ್ಞಾನ ಮತ್ತು ವೇದಾಂತದ, ನಡುವೆ ಸಾಮರಸ್ಯವನ್ನು ಸಾಧಿಸಲು ಪ್ರಯತ್ನಿಸಿದ ಮೊದಲನೆಯ ಮಹಾನ್ ಚಿಂತಕರೆಂದರೆ ಸ್ವಾಮಿ ವಿವೇಕಾ ನಂದರೇ. ವಿಜ್ಞಾನ ಮತ್ತು ಧರ್ಮಗಳು ಮಾನವ ಪ್ರಜ್ಞೆಯ ಎರಡು ಬೇರೆ ಬೇರೆ ಸ್ತರಗಳಿಗೆ ಸೇರಿದುವಾದರೂ ಅವುಗಳ ನಡುವೆ ಕೆಲವು ಸಾಮಾನ್ಯ ಲಕ್ಷಣಗಳಿವೆ, ಅವು ಪರಸ್ಪರ ಪೂರಕವಾದವು ಎಂಬುದನ್ನು ಸ್ವಾಮಿ ವಿವೇಕಾನಂದರು ತೋರಿಸಿಕೊಟ್ಟರು. ಇಪ್ಪತ್ತನೆಯ ಶತಮಾನದ ಮಧ್ಯಭಾಗದ ವೇಳೆಗೆ, ಸಾಪೇಕ್ಷತಾ ಸಿದ್ಧಾಂತ (relativity theory), ಕ್ವಾಂಟಂ ಸಿದ್ಧಾಂತ (quantum theory), ಬೈಜಿಕ ಭೌತ ವಿಜ್ಞಾನ (nuclear physics), ಇಲೆಕ್ಟ್ರಾನಿಕ್ಸ್ (electronics) ಮತ್ತು ಇತರ ವಿಜ್ಞಾನ ಕ್ಷೇತ್ರಗಳಲ್ಲಿ ದಿಗ್ಭ್ರಮೆಗೊಳಿಸುವ ಪ್ರಗತಿ ಸಾಧಿತವಾಗಿತ್ತು. ವಿವೇಕಾನಂದರು ವ್ಯಾಖ್ಯಾನಿಸಿದಂತೆ ವೇದಾಂತದ ವಿಶ್ವಸಾಮಾನ್ಯ ಕಲ್ಪನೆಗಳನ್ನು ವಿಜ್ಞಾನದಲ್ಲಿ ನಡೆದಿದ್ದ ಪ್ರಗತಿಯೊಂದಿಗೆ ಹೊಂದಾಣಿಕೆ ಮಾಡಬೇಕಾದ ಅಗತ್ಯ ಬಹಳವಾಗಿತ್ತು. ರಂಗನಾಥಾನಂದರು ಈ ಕೆಲಸವನ್ನು ಕೈಗೆತ್ತಿಕೊಂಡರು. ಆಧುನಿಕ ಚಿಂತನಾಕ್ಷೇತ್ರಕ್ಕೆ ರಂಗನಾಥಾ ನಂದಜಿಯವರ ಕಾಣಿಕೆ ಅತ್ಯಂತ ಸ್ವಂತಿಕೆಯಿಂದ ಕೂಡಿದ್ದೂ, ಮಾರ್ಗಪ್ರವರ್ತಕವೂ (trend-setting) ಆದುದಾಗಿತ್ತು.

ರಂಗನಾಥಾನಂದರು ಸುಮಾರು ಅರ್ಧ ಶತಮಾನದಷ್ಟು ಕಾಲ ಭಾರತದಲ್ಲಿ ಬೆಳೆಯುತ್ತಿದ್ದ ಪ್ರಾಪಂಚಿಕತೆ (materi-alism), ಅನೈತಿಕತೆ ಮತ್ತು ಭ್ರಷ್ಟಾಚಾರ ಇವುಗಳ ವಿರುದ್ಧ ಹೋರಾಡಲು ಆವಶ್ಯಕವಾದ ಪ್ರಬಲ ನೈತಿಕ ಶಕ್ತಿಯಾಗಿ ಕೆಲಸ ಮಾಡಿದರು. ಅವರ ಪ್ರಾಮಾಣಿಕ ಧ್ವನಿಯು ದೇಶದ ನಾನಾ ಭಾಗಗಳ ನಾಯಕರನ್ನು, ಆಡಳಿತ ವರ್ಗದವರನ್ನು, ವ್ಯಾಪಾರಿಗಳನ್ನು, ವಿದ್ಯಾವಂತರನ್ನು ಒಡವರ ಮತ್ತು ಮಹಿಳೆ ಯರ ವಿಷಯದಲ್ಲಿ ತಮ್ಮ ಕರ್ತವ್ಯವೇನು ಎಂಬುದನ್ನು ಯೋಚಿಸುವಂತೆ ಮಾಡಿತು. ಕೆಲವು ಪ್ರಾಂತಗಳಲ್ಲಿ ಇನ್ನೂ ಪ್ರಚಲಿತವಾಗಿದ್ದ ಅಸ್ಪೃಶ್ಯತೆ, ಮತ್ತು ಕೆಳವರ್ಗದವರನ್ನು ತುಳಿಯುವಿಕೆ--ಇವುಗಳ ವಿರುದ್ಧ ರಂಗನಾಥಾನಂದರು ಮಾತನಾಡಿದರು. ಎಲ್ಲ ವಿಧವಾದ ಶೋಷಣೆಯನ್ನು ಅವರು ಖಂಡಿಸಿದರು.

ತಿಳಿವಳಿಕೆಯಿಂದ ಕೂಡಿದ ಜೀವನವಿಧಾನಕ್ಕೆ ಅವರು ಒಂದು ಆದರ್ಶವಾಗಿದ್ದರು. ಆಶ್ರಮಜೀವನ ಎನ್ನುವುದು ಸಂಕುಚಿತಗೊಳಿಸುವ ಶಕ್ತಿಯಲ್ಲ, ಮುಕ್ತಗೊಳಿಸುವ ಪ್ರಭಾವ ಎಂಬುದನ್ನು ಅವರ ಬದುಕು ಬೆಳಗಿ ತೋರಿಸುತ್ತಿತ್ತು. ಆಧ್ಯಾತ್ಮಿಕ ಜ್ಞಾನ ಮತ್ತು ಐಹಿಕ ಬದುಕಿನ ಯಶಸ್ಸು–ಇವನ್ನು ಸಮನ್ವಯಗೊಳಿಸುವುದು ಹೇಗೆ ಎಂಬುದನ್ನೂ, ಮಾನವ ಸೇವೆಗೆ ನಮ್ಮನ್ನು ನಾವು ಸಮರ್ಪಿಸಿಕೊಳ್ಳುವುದ ರಿಂದ ಅತ್ಯುನ್ನತ ಸಿದ್ಧಿಯನ್ನು ಪಡೆದುಕೊಳ್ಳುವುದು ಸಾಧ್ಯ ಎಂಬುದನ್ನೂ ಅವರ ಬದುಕು ತೋರಿಸಿತು. ಸ್ವಾಮಿ ವಿವೇಕಾ ನಂದರು ಒಂದು ನೂರು ವರ್ಷಗಳ ಹಿಂದೆ ಪ್ರತಿಪಾದಿಸಿದ ಅನುಷ್ಠಾನ ವೇದಾಂತದ ತತ್ತ್ವಗಳು ಎಷ್ಟು ಪ್ರಯೋಗ ಸಾಧ್ಯವಾದುವು ಎಂಬುದನ್ನೂ ಅವರ ಬದುಕು ಸ್ಪಷ್ಟವಾಗಿ ತೋರಿಸಿತು.

ಭಾರತದ ಸಾಂಸ್ಕೃತಿಕ ಐಕ್ಯತೆ ಮತ್ತು ಭಾರತದ ಜನರ ಜೀವಂತ ಐಕ್ಯತೆ–ಇವುಗಳ ಸಂಕೇತವಾಗಿದ್ದರು ಸ್ವಾಮಿ ರಂಗನಾಥಾನಂದರು. ಭಾರತದ ವಿವಿಧ ಭಾಗಗಳಿಗೆ ಸೇರಿದ ಜನರು, ವಿವಿಧ ಧರ್ಮದ ಜನರು, ರಾಜಕಾರಣಿಗಳು ಕೂಡ ರಂಗನಾಥಾನಂದರು ತಮಗೆ ಆತ್ಮೀಯರು ಎಂದು ಭಾವಿಸಿ ದ್ದರು. ರಂಗನಾಥಾನಂದರ ಮರಣದಿಂದ ಈ ಶ್ರದ್ಧಾ ಕೇಂದ್ರ ಕಣ್ಮರೆಯಾದದ್ದು, ಈ ಐಕ್ಯತೆಯ ಸಂಕೇತ ಕಣ್ಮರೆಯಾದದ್ದು ರಾಷ್ಟ್ರದ ಸಾಮೂಹಿಕ ಪ್ರಜ್ಞೆಯಲ್ಲಿ ಒಂದು ದೊಡ್ಡ ಶೂನ್ಯವನ್ನು ಸೃಷ್ಟಿಸಿದೆ.

ಮಹಾಪುರುಷರನ್ನು ಕುರಿತು ಸ್ಟೀಫನ್ ಸ್ಪೆಂಡರ್ ಬರೆದಿರುವ ಈ ಪಂಕ್ತಿಗಳು ರಂಗನಾಥಾನಂದರ ವ್ಯಕ್ತಿ ಚಿತ್ರವನ್ನು ಸಮರ್ಪಕವಾಗಿ ವರ್ಣಿಸುತ್ತವೆ:

**ಸೂರ್ಯನಿಂದಲೆ ಜನಿಸಿ,**
**ಕೆಲಕಾಲ ಸೂರ್ಯನೆಡೆ ನಡೆದು;**
**ತಿಳಿಯಾಗಸದಿ ತಮ್ಮ**
**ಹೆಸರನ್ನು ಬರೆದವರು ಇವರು!**

✡